208	Tumkur	Tumkur	28	18	161	207
209	Tumkur	Turuvekere	99	25	206	330
	Tumkur Total		**841**	**489**	**1802**	**3132**
210	Udupi	Karkala	9	7	48	64
211	Udupi	Kundapura	7	0	7	14
212	Udupi	Saligrama	0	0	0	0
213	Udupi	Udupi	11	4	40	55
	Udupi Total		**27**	**11**	**95**	**133**
214	Uttara Kannada	Ankola	0	0	0	0
215	Uttara Kannada	Bhatkal	0	0	0	0
216	Uttara Kannada	Dandeli	0	0	0	0
217	Uttara Kannada	Haliyal	0	0	0	0
218	Uttara Kannada	Honnavar	0	0	1	1
219	Uttara Kannada	Karwar	0	0	33	33
220	Uttara Kannada	Kumta	4	0	40	44
221	Uttara Kannada	Mundgod	1	0	5	6
222	Uttara Kannada	Siddapura	9	2	64	75
223	Uttara Kannada	Sirsi	13	0	29	42
224	Uttara Kannada	Yellapura	0	0	0	0
	Uttara Kannada Total		**27**	**2**	**172**	**201**
	Grand Total		**16978**	**7808**	**48658**	**73444**

ವಿದ್ಯುತ್ ಲೋಡ್ ಶೆಡ್ಡಿಂಗ್ ಬಗ್ಗೆ

241 (426) ಶ್ರೀ ಸುನೀಲ್ ವಿ. ಹೆಗಡೆ (ಹಳಿಯಾಳ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ವಿದ್ಯುತ್ ಕಂಪನಿ, ಮಂಗಳೂರು ವಿದ್ಯುತ್ ಕಂಪನಿ, ಗುಲ್ಬರ್ಗ ವಿದ್ಯುತ್ ಕಂಪನಿ, ಚಾಮುಂಡಿ ವಿದ್ಯುತ್ ಕಂಪನಿ ಹಾಗೂ ಹುಬ್ಬಳ್ಳಿ ವಿದ್ಯುತ್ ಕಂಪನಿಗಳ ವ್ಯಾಪ್ತಿಯಲ್ಲಿ ಬರುವ ನಗರ ಪ್ರದೇಶ ಹಾಗೂ ಪಟ್ಟಣಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ದಿನಕ್ಕೆ ಎಷ್ಟು ಗಂಟೆಗಳ ಕಾಲ ಸಿಂಗಲ್ ಹಾಗೂ 3 ಫೇಸ್ ವಿದ್ಯುತ್‌ನ್ನು ಒದಗಿಸಲಾಗುತ್ತಿದೆ;

ಆ) ದಿವಸಕ್ಕೆ ಎಷ್ಟು ಗಂಟೆಗಳ ಕಾಲ ಲೋಡ್ ಶೆಡ್ಡಿಂಗ್ ಹಾಗೂ ಅದರಲ್ಲಿ ಅನ್ ಷೆಡ್ಯೂಲ್ ಲೋಡಿಂಗ್ ಆಗುತ್ತಿರುತ್ತದೆ (ಬೆಂಗಳೂರು ನಗರ, ಜಿಲಾ ಕೇಂದ್ರಗಳು, ತಾಲ್ಲೂಕು ಕೇಂದ್ರಗಳು ಹಾಗೂ ಗ್ರಾಮೀಣ ಪ್ರದೇಶಗಳ ಪೂರ್ಣ ಮಾಹಿತಿ ನೀಡುವುದು);

ಇ) ಬೆಂಗಳೂರು ನಗರದಲ್ಲಿ ಕೇವಲ ಒಂದು ಗಂಟೆ ಲೋಡ್ ಶೆಡ್ಡಿಂಗ್ ಎಂದು ಸಾರ್ವಜನಿಕವಾಗಿ ತಿಳಿಸಿ ದಿನಕ್ಕೆ 5 ರಿಂದ 6 ಗಂಟೆಗಳ ಕಾಲ ಲೋಡ್ ಶೆಡ್ಡಿಂಗ್ ಮಾಡುತ್ತಿರುವುದು ನಿಜವಲ್ಲವೇ;

ಈ) ಗ್ರಾಮೀಣ ಪ್ರದೇಶಗಳಲ್ಲಿ ದಿನಕ್ಕೆ 16 ಗಂಟೆಗಳ ಕಾಲ ಸಿಂಗಲ್ ಫೇಸ್ ಹಾಗೂ 3 ಫೇಸ್ ವಿದ್ಯುತ್ ನೀಡುವುದಾಗಿ ಆಶ್ವಾಸನೆಯನ್ನು ನೀಡಿ ಕೇವಲ 3 ಗಂಟೆಗಳ ಕಾಲ ವಿದ್ಯುತ್ ನೀಡುತ್ತಿರುವುದು ಸಮಂಜಸವೇ (ತಾಲ್ಲೂಕುವಾರು, ಬೆಂಗಳೂರು ನಗರ ಹಾಗೂ ಪಟ್ಟಣ ಪ್ರದೇಶಗಳ ಪೂರ್ಣ ಮಾಹಿತಿ ನೀಡುವುದು);

ಉ) ರಾಜ್ಯದ 5 ಕಂಪನಿಗಳ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಿಂದ ಯಾವ ಯಾವ ತಾಲ್ಲೂಕು ಹಾಗೂ ಯಾವ ಯಾವ ಪಟ್ಟಣಗಳಿಗೆ ಹಾಗೂ ಬೆಂಗಳೂರು ನಗರಕ್ಕೆ ದಿನಕ್ಕೆ ಎಷ್ಟು ಮಿಲಿಯನ್ ಯೂನಿಟ್‌ಗಳನ್ನು ನಿಗದಿಪಡಿಸಲಾಗಿದೆ;

ಊ) ನಿಗದಿಪಡಿಸಲು ಯಾವ ಮಾನದಂಡಗಳನ್ನು ಉಪಯೋಗಿಸಲಾಗುತ್ತಿದೆ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ರಾಜ್ಯದ ಎಲ್ಲಾ ಐದು ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಸರ್ಕಾರದ ಆದೇಶದಂತೆ, ಬೆಂಗಳೂರು ನಗರದಲ್ಲಿ ದಿನವಹಿ 23 ಗಂಟೆಗಳ ಕಾಲ ಇತರೆ ನಗರ/ಪಟ್ಟಣ ಪ್ರದೇಶಗಳಲ್ಲಿ 22 ಗಂಟೆಗಳ ಕಾಲ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 6 ಗಂಟೆಗಳ ಕಾಲ 3 ಫೇಸ್ ಮತ್ತು 6 ಗಂಟೆಗಳ ಕಾಲ ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಆ) ಕುಡಿಯುವ ನೀರಿನ ಸ್ಥಾವರಗಳಿಗೆ ಹಾಗೂ ಪ್ರಮುಖ ಸ್ಥಾವರಗಳಾದ ಆಸ್ಪತ್ರೆಗಳು, ವಿಮಾನ ನಿಲ್ದಾಣ, ಶಾಲೆಗಳಿಗೆ ಮತ್ತು ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ 3 ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುವುದು.

ಇ) ಫೆಬ್ರವರಿ–2010 ರ ದಿನಾಂಕ 6 ರಿಂದ 9 ರವರೆಗೆ ರಾಜ್ಯದ ವಿದ್ಯುತ್ ಜಾಲಕ್ಕೆ ವಿದ್ಯುತ್ ಪೂರೈಕೆ ಮಾಡುವ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರಗಳಾದ ಆರ್.ಟಿ.ಪಿ.ಎಸ್ ಮತ್ತು ಬಿ.ಟಿ.ಪಿ.ಎಸ್. ಘಟಕಗಳಲ್ಲಿ ಕಂಡು ಬಂದ ತಾಂತ್ರಿಕ ದೋಷಗಳಿಂದಾಗಿ ವಿದ್ಯುತ್ ಲಭ್ಯತೆಯಲ್ಲಿ ವ್ಯತ್ಯಯ ಉಂಟಾದುದರಿಂದ ಬೆಂಗಳೂರು ನಗರದಲ್ಲಿ 2 ರಿಂದ 3 ಗಂಟೆಗಳ ಕಾಲ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಅನಿವಾರ್ಯವಾಯಿತು.

ಈ) ರಾಜ್ಯದ ಎಲ್ಲಾ ಐದು ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಪ್ರಸ್ತುತ ಸರ್ಕಾರ ಮಾಡಿರುವ ಘೋಷಣೆಯಂತೆ, ಬೆಂಗಳೂರು ನಗರದಲ್ಲಿ ದಿನವಹಿ 23 ಗಂಟೆಗಳ ಕಾಲ ಇತರೆ ನಗರ/ಪಟ್ಟಣ ಪ್ರದೇಶಗಳಲ್ಲಿ 22 ಗಂಟೆಗಳ ಕಾಲ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 6 ಗಂಟೆಗಳ ಕಾಲ 3 ಫೇಸ್ ಮತ್ತು 6 ಗಂಟೆಗಳ ಕಾಲ ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಉ) ರಾಜ್ಯದ 5 ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ತಾಲ್ಲೂಕುವಾರು ನಗರ/ಪಟ್ಟಣವಾರು ದಿನವಹಿ ಮಿಲಿಯನ್ ಯೂನಿಟ್ ಗಳನ್ನು ನಿಗದಿಪಡಿಸುತ್ತಿಲ್ಲ. ಬೆಂಗಳೂರು ನಗರಕ್ಕೆಂದೇ ಪ್ರತ್ಯೇಕವಾಗಿ ದಿನವಹಿ ಮಿಲಿಯನ್ ಯೂನಿಟ್‌ಗಳನ್ನು ನಿಗದಿಪಡಿಸುತ್ತಿಲ್ಲ. ವಿದ್ಯುತ್ ಸರಬರಾಜು ಕಂಪನಿಗಳ ವಿದ್ಯುತ್ ಬೇಡಿಕೆಗಳನ್ನು ಕ್ರೋಢೀಕರಿಸಿ, ವಿವಿಧ ವಿದ್ಯುತ್ ಮೂಲಗಳ ಉತ್ಪಾದನಾ ಸಾಮರ್ಥ್ಯವನ್ನು ಆಧರಿಸಿ, ಲಭ್ಯತೆಗೆ ಅನುಗುಣವಾಗಿ ರಾಜ್ಯ ಸರ್ಕಾರವು ವಿವಿಧ ವಿದ್ಯು ವಿತರಣಾ ಕಂಪನಿಗಳಿಗೆ ಶೇಕಡವಾರು ವಿದ್ಯುತ್ ಹಂಚಿಕೆ ಮಾಡುತ್ತಿದೆ.

ಊ) ಲಭ್ಯತೆಗೆ ಅನುಗುಣವಾಗಿ ವಿದ್ಯುತ್ತನ್ನು ಶೇಕಡವಾರು ಹಂಚಿಕೆ ಮಾಡಲಾಗುವುದು.

ನಾಗಮಂಗಲವನ್ನು ಪಟ್ಟಣ ಪಂಚಾಯತಿಯಿಂದ ಮೇಲ್ದರ್ಜೆಗೇರಿಸುವುದು

242 (508) ಶ್ರೀ ಸುರೇಶ್‌ಗೌಡ (ನಾಗಮಂಗಲ) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆ, ನಾಗಮಂಗಲ ಪಟ್ಟಣವನ್ನು ಟೌನ್ ಪಂಚಾಯತಿಯಿಂದ ಪುರಸಭೆ ಹಂತಕ್ಕೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿ ಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.